ಒಂದೆರಡು ಲಕ್ಷ ರೂಪಾಯಿಗಳನ್ನು ಇಲ್ಲಿ ಕೆಲಸ ಮಾಡಿದ ಕಂಟ್ರಾಕ್ಟರುಗಳಿಗೆ ಕೊಡಲಾಗಿದೆ, ಇದು ಸ್ವಲ್ಪ ಹೆಚ್ಚಾದುದಕ್ಕಾಗಿ ಕ್ಷಮಿಸಬೇಕೆಂದು ಹೇಳಿದ್ದಾರೆ. ಹೀಗೆ ಅಲ್ಲಲ್ಲಿ ತಾರತಮ್ಯ ಮಾಡಿ ಕೆಲಸಗಳನ್ನು ಮಾಡಿದ್ದಾರೆ. ಇದನ್ನೆಲ್ಲ ಸರಿ ಮಾಡಿ ಇಲ್ಲಿ ಬಾಕಿ ಇರುವ ತಿಲ್ಲೂಂಗಳಿಗೂ ಬೇಗನೆ ಹಣ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರಲ್ಲಿ ಎಕ್ಸಿಕ್ಯುಟಿವ್ ಇಂಜನೀಯರ್‌ರವರು ತಾರತಮ್ಯ ಮಾಡಿದ್ದಾರೆ ಎನ್ನುವುದು ನನಗೆ ತಿಳಿಯದು. ಉಳಿದ ಕೆಲಸಗಳನ್ನು ಮಾಡಿರುವುದಕ್ಕೆ ಹಣ ಕೊಡುವ ಪ್ರಯತ್ನ ಮಾಡುತ್ತೇನೆ.

1-30 P.M.

RELIEF WORKS IN TUMKUR DISTRICT

330. SRI T. R. TARE GOWDA (Kallambella) :—Will the Minister for Revenue be pleased to state :—

(*a*) whether the Government intends to continue the relief works on the draught affected taluk of Tumkur District ;

(*b*) whether the Government has instructed the concerned officers not to take up the new works in the draught affected taluks of Tumkur District ?

SRI N. HUTCHAMASTHY GOWDA (Minister for Revenue) .—

(*a*) and (*b*) There is no need for relief works in the districts other than Bijapur, Belgaum districts and Hyderabad Karnataka region, where the conditions are very acute.

ಶ್ರೀ ಟಿ. ತಾರೇಗೌಡ .—ಈ ವರ್ಷದಲ್ಲಿ ತುಮಕೂರು ಜಿಲ್ಲೆಯಲ್ಲಿ ಯಾವ ಕೆಲಸಗಳನ್ನು ತೆಗೆದು ಕೊಳ್ಳಬಾರದೆಂದು ತಮ್ಮ ಅಭಿಪ್ರಾಯವೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ —ಆ ಅಭಿಪ್ರಾಯವನ್ನು ನಾನು ಹೇಳಲಿಲ್ಲ. ಬಾಕಿ ಇರುವ ಹಣವನ್ನು ಮೊದಲು ಕೊಟ್ಟು ಉಳಿದುದನ್ನು ಆಮೇಲೆ ಯೋಚನೆ ಮಾಡುತ್ತೇವೆಂದು ಹೇಳಿದೆ. ಇನ್ನೊಂದು ಮುಖ್ಯ ವಿಷಯವೆಂದರೆ ಆ ಭಾಗದಲ್ಲಿ ಈಗ ಪೂರ್ತಿ ಕೆಲಸಗಳು ನಿಂತುಹೋಗಿಲ್ಲ. ಕ್ಯಾಷ್ ಪ್ರೋಗ್ರಾಮ್‌ನಲ್ಲಿ ೫ ಲಕ್ಷದ ೫೫೭ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅವಕಾಶವಿದೆ. ಡಿ.ಪಿ.ಎ.ಸಿ. ಪ್ರೋಗ್ರಾಮ್‌ನಲ್ಲಿ, ಮಧುಗಿರಿ ಸಬ್-ಡಿವಿಜನ್‌ಗೆ ಸಂಬಂಧಪಟ್ಟಂತೆ ೫ ಲಕ್ಷದ ೧೧ಸಾವಿರದ ೧೭೮ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅವಕಾಶವಿದೆ. ಕಮ್ಯುನಿಕೇಷನ್‌ಗೆ ೧೧ಲಕ್ಷ ೬೭ಸಾವಿರದ ೬೮೧ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅವಕಾಶವಿದೆ. ಆಫಾರೆಸ್ಟೇಷನ್‌ಗೆ ಸಂಬಂಧಪಟ್ಟಂತೆ ೧,೯೯,೮೮೬ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅವಕಾಶವಿದೆ. ಮಾರ್ಜಿನಲ್ ಫಾರ್ಮ್ಸ್ ಸ್ಕೀಮ್‌ನಲ್ಲಿ, ಡಿ.ಪಿ.ಎ.ಸಿ. ಕವರ್ ಆಗದಿರುವ ತಾಲ್ಲೂಕ್‌ಗಳಲ್ಲಿ ಒಂದು ಲಕ್ಷದ ೯೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಲು ಅವಕಾಶವಿದೆ. ಗುಬ್ಬಿ ತಾಲ್ಲೂಕೀನಲ್ಲಿ ಲ್ಯಾಂಡ್ ಆರ್ಮಿಗೆ ಒಂದು ಲಕ್ಷ ೭೪ ಸಾವಿರ ರೂಪಾಯಿಗಳನ್ನು ಖರ್ಚು ಮಾಡಲು ಮತ್ತು ಸಾಯಿಲ್ ಕನಸರ್‌ವೇಷನ್‌ಗೆ ೨೪ ಲಕ್ಷದ ೩೦ ಸಾವಿರರೂಪಾಯಿಗಳನ್ನು ಖರ್ಚು ಮಾಡಲು ಅವಕಾಶವಿದೆ. ಈ ಎಲ್ಲ ಕಾರ್ಯಕ್ರಮಗಳು ನಡೆಯುತ್ತಿವೆ. ಮತ್ತು ೧೩ ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ.

ಶ್ರೀ ಟಿ. ತಾರೇಗೌಡ .—ವಿಜಾಪುರ, ಬಿದರೆ ಜಿಲ್ಲೆಗಳಲ್ಲಿ ಕಠಿಣ ಪರಿಸ್ಥಿತಿ ಇದೆ ಎಂಬುದಾಗಿ ಈಗ ನಡೆಯುತ್ತಿರುವ ಕೆಲಸಗಳನ್ನು ಸಹ ಮಧ್ಯದಲ್ಲಿಯೇ ನಿಲ್ಲಿಸಿಬಿಡುವುದಕ್ಕೆ ಏನಾದರೂ ಸ್ಥಳದ ಅಧಿಕಾರಿಗಳಿಗೆ ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಈಗ ನಡೆಯುತ್ತಿರುವ ಕೆಲಸಗಳು ನಡೆಯುತ್ತಿರುತ್ತವೆ. ಅವುಗಳನ್ನು ನಿಲ್ಲಿಸುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ .—ಯಾವ ಯಾವ ಕಾರ್ಯಕ್ರಮಗಳ ಕೆಳಗೆ ಎಷ್ಟೆಷ್ಟು ಜನರು ಕೆಲಸ ಮಾಡುತ್ತಿದ್ದಾರೆಂಬುದನ್ನು ಹೇಳುತ್ತೀರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ .—ಕ್ಯಾಷ್ ಪ್ರೋಗ್ರಾಮ್‌ನಲ್ಲಿ ೧೨೦೦ ಜನರು, ಲ್ಯಾಂಡ್ ಆರ್ಮಿಯಲ್ಲಿ ೩೨೫ ಜನರು, ಡಿ.ಪಿ.ಎ.ಪಿ.ನಲ್ಲಿ ೨೫೦೦ ಜನರು, ಸಾಯಿಲ್ ಕನ್‌ಸರ್‌ವೇಷನ್‌ನಲ್ಲಿ ೬೨೦೦ ಜನರು ಪಿ.ಡಬ್ಲ್ಯೂ.ಡಿ. ಮತ್ತು ಇತರೇ ಕೆಲಸಗಳಲ್ಲಿ ೩೨೦೦ ಜನರು ಕೆಲಸ ಮಾಡುತ್ತಿದ್ದಾರೆ. ಒಟ್ಟು ೧೩,೪೨೫ ಜನರು ಕೆಲಸ ಮಾಡುತ್ತಿದ್ದಾರೆ.

ಶ್ರೀ ಆಂದಾನಯ್ಯ .—ತುಂಬಕೂರು ಜಿಲ್ಲೆಯಲ್ಲಿ ಕಾಮಗಾರಿ ಕೆಲಸಗಳ ಅವಶ್ಯಕತೆ ಇಲ್ಲ ಎಂದು ಹೇಳಿದಿರಿ. ಕುಣಿಗಲ್ ತಾಲ್ಲೂಕ್‌ನ ಯಡಿಯೂರು, ಅಮೃತೂರು ಮುಂತಾದ ಕಡೆಗಳಲ್ಲಿ ಮತ್ತು ತಮ್ಮ ಕ್ಷೇತ್ರದ ಕೆಲವು ಭಾಗಗಳಲ್ಲಿ ಮಳೆ ಬಾರದೆ, ಖುಷ್ಕಿ ಬೆಳೆಯೆಲ್ಲಾ ಹೋಗಿ ರೈತರಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ? ಇಂತಹ ಕಡೆಗಳಲ್ಲಿಯಾದರೂ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಳ್ಳುವಂತೆ ಸ್ಥಳದ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ನನ್ನ ಕ್ಷೇತ್ರದ ಕೆಲವು ಭಾಗಗಳಲ್ಲಿ ತೊಂದರೆಯಾಗಿರುವುದು ಸ ಪ್ಪವಾಗಿ ಗೊತ್ತಿದ್ದರೂ ಸಹ ಹಣದ ಮಿತಿ ಮತ್ತು ಇತರ ಕೆಲವು ಕಾರಣಗಳಿಂದ ಹಣ ಕೊಡುವುದನ್ನು ನಿಲ್ಲಿಸಬೇಕಾಯಿತು. ಮತ್ತೆ ಹಣ ಬಂದ ಕೂಡಲೆ ಯಾವ ಯಾವ ಭಾಗಗಳಲ್ಲಿ ಕೆಲಸ ತೆಗದುಕೊಳ್ಳಬೇಕೆಂಬುದನ್ನು ಆಲೋಚನೆ ಮಾಡಿ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ.

DESILTING OF TANKS IN THE STATE

254. SRI ANDANAIAH (Kunigal) .—Will the Minister for Public Works and Electricity be pleased to state :—

(*a*) whether the Government is aware that 90 per cent of the Irrigation tanks in the State have been completely silted up with sand;

(*b*) whether the Goverament has received any petitions from the public all over the State for desilting of tanks ; if so, the action taken by the Government ?

SRI H. M. CHANNABASAPPA (Minister for Public Works and Electricity) .

(*a*) No.

(*b*) Petitions are being received from the Public for desilting of tanks Desilting Tanks is not being done since the same is found to be prohibitively costly and uneconomical.

ಶ್ರೀ ಆಂದಾನಯ್ಯ .—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಗೊತ್ತಿಲ್ಲ ಎಂದು ಹೇಳಿದ್ದೀರಿ. ಅಂದರೆ ತಮ್ಮ ಅಭಿಪ್ರಾಯದಲ್ಲಿ ಯಾವ ಒಂದು ಕೆರೆಯೂ ಸಹ ಮರಳಿನಿಂದ ಮುಚ್ಚಿಹೋಗಿಲ್ಲ ಎಂದು ಅರ್ಥವೇ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ .—ರಾಜ್ಯದಲ್ಲಿನ ಶೇಕಡ ೯೦ರಷ್ಟು ನೀರಾವರಿ ಕೆರೆಗಳು ಮರಳಿನಿಂದ ಮುಚ್ಚಿಹೋಗಿರುವುದು ಸರ್ಕಾರದವರಿಗೆ ಗೊತ್ತಿದೆಯೇ ಎಂದು ಕೇಳಿದ್ದಕ್ಕೆ ಆ ರೀತಿ ಉತ್ತರ ಕೊಡಲಾಗಿದೆ.

ಶ್ರೀ ಆಂದಾನಯ್ಯ .—ಎಷ್ಟು ಪರ್ಸೆಂಟ್ ಕೆರೆಗಳು ಮರಳಿನಿಂದ ಮುಚ್ಚಿಹೋಗಿವೆ ಎಂದು ಹೇಳುತ್ತೀರಾ ?